# ಸಂಸಾರ ಅನುಬಂಧ; ಹೀಗಿದ್ದಾಗ ಮಾತ್ರ...

■ ಪದ್ಮಾ ಮೂರ್ತಿ, ಅರಸೀಕೆರೆ



ಚಿತ್ರ: ಅನೂಪ್ ಆರ್.ತಿಪ್ಪೇಸ್ವಾಮಿ

ಎಷ್ಟೇ ಅನ್ಯೋನ್ಯವಾಗಿದ್ದರೂ ಆರ್ಥಿಕ ವಿಚಾರಗಳಲ್ಲಿ, ಮನೆ ನಿರ್ವಹಣೆಯ ವಿಷಯದಲ್ಲಿ, ಕುಟುಂಬದ ಇತರ ಸಮಸ್ಯೆಗಳ ಸಂಬಂಧದಲ್ಲಿ... ಹೀಗೆ ಯಾವುದೋ ಒಂದು ಸಂದರ್ಭದಲ್ಲಿ ಕೆಲ ಘಟನೆಗಳು ಪತಿ, ಪತ್ನಿಯರ ಮಧ್ಯೆ ಜಗಳಕ್ಕೆ ಕಾರಣವಾಗುತ್ತದೆ. ಇಂತಹ ಸಂದರ್ಭ ಬಂದಾಗ ಇಬ್ಬರೂ ಕುಳಿತು ಅದನ್ನು ಶೀಘ್ರವೇ ಪರಿಹರಿಸಿಕೊಳ್ಳಬೇಕು. ಅದನ್ನು ಧನಾತ್ಮಕತೆಯ ದಾರಿಗೆ ತರುವುದು ಇಬ್ಬರ ಜವಾಬ್ದಾರಿಯೂ ಹೌದು.

ನಾನು ನೋಡಿ, ಎಷ್ಟು ಹಿತ ಮಿತವಾಗಿ ಖರ್ಚು ಮಾಡುತ್ತೇನೆ. ಆದರೆ ಗಂಡ ಸಿಕ್ಕಾಪಟ್ಟೆ ಖರ್ಚು ಮಾಡುತ್ತಾನೆ. ಭವಿಷ್ಯದ ಬಗ್ಗೆ ಆಲೋಚನೆ ಇಲ್ಲ... ಎಂಬುದು ಕೆಲವರ ವಾದವಾದರೆ, ಪತ್ನಿಯೂ ಸಾಕಷ್ಟು ಸಂಪಾದಿಸುತ್ತಾಳೆ, ಆದರೆ ಅವಳಿಂದ ಏನು ಆರ್ಥಿಕ ಅನುಕೂಲವಿಲ್ಲ ಎಂಬುದು ಕೆಲವು ಪತಿರಾಯರ ವಾದವಾಗಿರುತ್ತದೆ. ಇಬ್ಬರ ನಡುವೆ ಅನ್ಯೋನ್ಯತೆ ಕಡಿಮೆಯಾಗಿ ಬಿಟ್ಟರೆ ಈ ರೀತಿಯ ದೋಷಾರೋಪಣೆ, ದೂರುಗಳು ಸಹಜವಾಗಿ ಹೋಗುತ್ತದೆ. ಇದರಿಂದ ಬದುಕು ನರಕವಾಗುತ್ತದೆ. ಈ ಕಾರಣದಿಂದ ಅರಿತು, ಬೆರೆತು ಪತಿ ಪತ್ನಿ ಸಂಸಾರದಲ್ಲಿ ಯಾವಾಗಲೂ ನಡೆದುಕೊಂಡರೆ, ಸಂಸಾರ ಸರಿಗಮವಾಗಿರುತ್ತದೆ.

ಸಂಸಾರದಲ್ಲಿ ಯಾವಾಗಲೂ ಪತಿ ಪತ್ನಿ ಬುಸ ಬುಸ ಎಂಬ ಸಮಸ್ಯೆಗೆ ಮುಖ್ಯ ಕಾರಣ .. ಇಬ್ಬರ ಮಧ್ಯೆ ಮಧುರವಾದ ಸಂಬಂಧ, ಸಾಮಿಪ್ಯ.. ಇಲ್ಲದಿರುವುದೇ ಆಗಿದೆ. ಇಬ್ಬರು ಉದ್ಯೋಗಸ್ಥರಾಗಿರುವುದು, ಕೆಲಸದ ಒತ್ತಡ ಇಬ್ಬರ ನಡುವೆ ಇರುವ ಅಭಿಪ್ರಾಯ ಭೇದಗಳು ಇವೆಲ್ಲವೂ ಪರಸ್ಪರ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ.

ಕೆಲಸದ ಒತ್ತಡ ನಿಮ್ಮ ಸಮಸ್ಯೆಗೆ ಕಾರಣವಾದರೆ, ಮೊದಲು ಈ

**ಸಂಸಾರದಲ್ಲಿ ಅನ್ಯೋನ್ಯತೆ ಜತೆಗೆ ಮನೆಕೆಲಸದಲ್ಲೂ ಪರಸ್ಪರ ಸಹಕಾರ ಇದ್ದರೆ ಪತ್ನಿಗೆ ಕೆಲಸದ ಹೊರೆ ಕಡಿಮೆಯಾಗಿ ಸಂಸಾರ–ಆರೋಗ್ಯ ಎರಡೂ ಸುಗಮವಾಗಲು ಸಾಧ್ಯ. ಇಬ್ಬರೂ ಸಕಾರಾತ್ಮಕವಾಗಿ ಚಿಂತನೆ ನಡೆಸಿ ಸಹಬಾಳ್ವೆ ನಡೆಸಿದರೆ ಸಂಸಾರ ಆನಂದ ಸಾಗರವಾಗುವುದರಲ್ಲಿ ಸಂಶಯವಿಲ್ಲ.**